◆ **ವಿಮರ್ಶೆಯಲ್ಲಿ ಬಹಳ ಮುಖ್ಯವಾದ ತಾತ್ವಿಕ ಪ್ರಶ್ನೆಗಳನ್ನ ಕೇಳಿಕೊಳ್ತಾ ಇದ್ದವರು ಒಂದು ಹಂತದಲ್ಲಿ ವಿಮರ್ಶೆಯನ್ನು ಬಿಟ್ಟು ಭಾಷಾಶಾಸ್ತ್ರದ ಕಡೆ ಹೊರಳಿಬಿಟ್ರಿ. ಭಾಷೆಯ ಕುರಿತಾದ ಚಿಂತನಶೀಲ ಬರಹಗಳಲ್ಲಿ ತೊಡಗಿಸಿಕೊಂಡ್ರಿ. ಆಗೀಗ ಕೆಲವು ಮುನ್ನುಡಿಗಳನ್ನು ಬರೆದಿರಬಹುದು. ಆದರೆ ನಿಮ್ಮ ವಿಮರ್ಶೆಯ ಬೆಸ್ಟ್ ಪಾರ್ಟ್ ಅದರಲ್ಲಿ ಇಲ್ಲ. ಈ ವಿಮರ್ಶಾ ವೈರಾಗ್ಯಕ್ಕೆ ಏನು ಕಾರಣ?**

ಭಾಷಾಶಾಸ್ತ್ರಕ್ಕೆ ನೀವು ಯಾಕೆ ಬಂದ್ರಿ ಅನ್ನುವಷ್ಟೇ ವಿಚಿತ್ರವಾಗಿದೆ ನಿಮ್ಮ ಪ್ರಶ್ನೆ. ನಾನು ವಿಮರ್ಶೆ ಬರೀದೆ ಇರೋದ್ರಿಂದ ವಿಮರ್ಶಾ ಲೋಕಕ್ಕೆ ನಷ್ಟವೇನೂ ಇಲ್ಲ. ನಾನೇ ಅಂತ ಅಲ್ಲ. ಯಾರೇ ಇರಲಿ, ಅವರು ಬರೆಯೋದರಿಂದ ಅದು ಉದ್ಧಾರವೂ ಆಗೋದಿಲ್ಲ, ಬರೆಯದೇ ಇರೋದರಿಂದ ನಷ್ಟವೂ ಆಗೋದಿಲ್ಲ. ವಿಮರ್ಶಾ ವಲಯಕ್ಕೆ ಅದರದೇ ಆದ ಘನತೆ ಇದೆ. ತನ್ನದೇ ರೀತಿಯಲ್ಲಿ ಅದು ಬೆಳೆಯುತ್ತೆ. ಈ ಮಧ್ಯೆ ಏನಾಯ್ತು ಅಂದ್ರೆ ನಾನು ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದ್ಬಿಟ್ಟೆ. ಚಂದ್ರಶೇಖರ ಕಂಬಾರರು ಕರ್ಕೊಂಡು ಬಂದ್ರು. ಅದರ ಕತೆ ಮತ್ತೆ ಬೇರೆ ಇದೆ. ಅದರ ಬಗ್ಗೆ ಬೇರೇನೆ ಬರೀಬೇಕಾಗಿದೆ. ಬರೀತೀನೊ ಇಲ್ವೋ ಗೊತ್ತಿಲ್ಲ. ಅದು ಈಗ ಬೇಡ.

ನಾನು ಮತ್ತು ಪುರುಷೋತ್ತಮ ಬಿಳಿಮಲೆ ಒಂದೇ ದಿನ ವಿಶ್ವವಿದ್ಯಾಲಯಕ್ಕೆ ಬಂದ್ವಿ. ಆಗ ಕನ್ನಡ ವಿಶ್ವವಿದ್ಯಾಲಯ ಅಂತಂದ್ರೆ ನಲವತ್ತು ಪುಟಗಳ ಒಂದು ಆಕ್ಟ್ ಅಷ್ಟೆ. ಅದರೊಳಗಡೆ ಯಾವ ವಿಭಾಗಗಳು ಇರ್ಬೇಕು, ಹೇಗಿರ್ಬೇಕು ಅಂತೆಲ್ಲ ಇರಲಿಲ್ಲ. ನಾವು ಆಗಸ್ಟ್ ತಿಂಗಳಲ್ಲಿ ಸೇರಿಕೊಂಡ ತಕ್ಷಣ, ಪಿಎಚ್‌ಡಿ., ಅಪ್ಲಿಕೇಶನ್‌ಗಳನ್ನ ಕರೆದ್ವಿ. ಆವಾಗ ಹೆಚ್ಚಿನ ಜನ ಪಿಎಚ್‌.ಡಿ., ಮಾರ್ಗದರ್ಶಕರಿರಲಿಲ್ಲ. ಬೇರೆಯವರನ್ನ ಗೈಡ್‌ಗಳಾಗಿ ಗುರುತಿಸಿದ್ವಿ. ಆಗ ಸಾಹಿತ್ಯಕ್ಕೆ ಸಂಬಂಧಿಸಿದ್ದೆಲ್ಲ ನಂದು, ಜಾನಪದಕ್ಕೆ ಸಂಬಂಧಿಸಿದ್ದೆಲ್ಲ ಬಿಳಿಮಲೆ ಅವರದು ಅಂತಾಯ್ತು. ಆಮೇಲೆ ನೇಮಕಾತಿಗಳಾಗೋಕೆ ಶುರುವಾಯಿತು. ರಹಮತ್ ಬಂದ್ರು, ಮಲ್ಲೇಪುರಂ ಬಂದ್ರು, ಕರೀಗೌಡ್ರು ಬಂದ್ರು. ಅಂದ್ರೆ ಇವರೆಲ್ಲ ನೇರ ನೇಮಕಾತಿಯಿಂದ ಬಂದೋರು. ಕೆಲವರು ವಿಜಿಟಿಂಗ್ ಆಗಿ ಬಂದ್ರು. ಎಚ್.ಎಸ್. ರಾಘವೇಂದ್ರರಾವ್, ಓ.ಎಲ್. ನಾಗಭೂಷಣಸ್ವಾಮಿ ಹೀಗೆ ಹಲವರು. ಬಂದವರಲ್ಲಿ ಹೆಚ್ಚಿನವರು ಸಾಹಿತ್ಯದವರಾಗಿದ್ರು. ಆಮೇಲೆ ವಿಭಾಗಗಳನ್ನ ಹಂಚಬೇಕಾಗಿ ಬಂತು. ಹಿಂದೆಲ್ಲ ಸುಮಾರಾಗಿ ನಾನು ಭಾಷಾಶಾಸ್ತ್ರವನ್ನ ಪಾಠ ಮಾಡ್ತಿದ್ದೆ. ಹೀಗಾಗಿ 'ಕನ್ನಡ ಭಾಷಾಭಿವೃದ್ಧಿ' ಅಂತ ಒಂದು ವಿಭಾಗವನ್ನು ಮಾಡಿ ಅದಕ್ಕೆ ನನ್ನನ್ನು ತಳ್ಳಲಾಯಿತು. ಇವರೆಲ್ಲರೂ ಸಾಹಿತ್ಯ ವಿಭಾಗಕ್ಕೆ ಸೇರಿಕೊಂಡ್ರು. ಆಗ ಇನ್ನೊಂದು ವಿಚಿತ್ರ ಘಟನೆ ನಡೀತು. ಕಂಬಾರರು ಒಂದು ದಿವಸ 'ನೀನು ಬಂದು ಭೇಟಿಯಾಗು' ಅಂದ್ರು. ಒಂದು ಲಕೋಟೆ ತೋರ್ಸಿ ನನ್ನೆದುರು ಟಕ್ ಅಂತ ಎಸೆದ್ರು. 'ಕೋಲಗುರುವಿನ ಮರಣವಾರ್ತೆ ಕಾಲಸರ್ಪನ ತಂದು ಸಂಜಯ ಹೇಳಿಗೆಯನೀಡಾಡಿದನು ಧೃತರಾಷ್ಟ್ರನಿದಿರಿನಲಿ' ಎಂಬಂತೆ ಕಂಡಿತು ನನಗೆ. ಕಂಬಾರರಿಗೆ ಬರೆದಿರೋ ಪತ್ರ ಅದು. ಯಾವ ಕಾರಣದಿಂದಾಗಿ ಇವರನ್ನ ಲಿಂಗ್ವಿಸ್ಟಿಕ್ಸ್‌ಗೆ ನೇಮಿಸಿಕೊಂಡಿದ್ದೀರಿ? ಇವರೇನು ಲಿಂಗ್ವಿಸ್ಟಿಕ್ಸ್‌ನಲ್ಲಿ ಎಂ.ಎ. ಮಾಡಿದ್ದಾರಾ? ಏನ್ ಬರೆದಿದ್ದಾರಿವರು? ಕನ್ನಡ ವಿಶ್ವವಿದ್ಯಾಲಯದ ಭಾಷಾಶಾಸ್ತ್ರ ವಿಭಾಗದ

